ಎಚ್. ಸಿದ್ಧಾರ್ಥ ಹೆಬ್ಬಾರ್, ಈದು
*ಪರಿವರ್ತನೆ ಹೊಂದದೆ ಇರುವ ಜೀವಿ ಯಾವುದು?*



ಹಾಲಿನವನು – ದ್ವಾಪರಯುಗದಿಂದ ಇಂದಿನವರೆಗೂ ಅಷ್ಟೇ ನೀರು ಬೆರೆಸುತ್ತಾನೆ!

ಆರ್. ಮಧುಸೂದನ್, ಹಾಸನ
*ಯಮಗಂಡಕಾಲದಲ್ಲಿ ಲಗ್ನವಾದ ನನ್ನ ಮಿತ್ರನ ರಾಹುಕಾಲದಲ್ಲಿ ಹುಟ್ಟಿದ ಮಗುವಿಗೊಂದು ಹೆಸರು ಸೂಚಿಸಿ.*
ಹಾನಿಕರ, ದುಷ್ಟ ಮುಹೂರ್ತಗಳ ಸಂಯೋಗದಲ್ಲಿ ಹುಟ್ಟಿದವನಾದ್ದರಿಂದ – ರಾಹುಲ್‌ಯಮ್‌ಜೀ!

ಪೇಂಟರ್ ಪಾಪು, ಸಂತೇಮರಹಳ್ಳಿ
*ಮೊದಲು ಮಾಡಿದ ಪ್ರೀತಿಯನ್ನು ಮರೆಯೋಕ್ಕೆ ಆಗೋಲ್ಲ, ಯಾಕೆ?*
ತಪ್ಪುಗಳ ಜಾಯಮಾನವೇ ಹಾಗೆ; ಆಗಾಗ್ಗೆ ಮನದಲ್ಲಿ ಎದ್ದೆದ್ದು ಕುಣಿಯುತ್ತವೆ.

ಎಂ.ಎನ್. ಸೋಮಶೇಖರ್, ಮೈಸೂರು
*ಸರ್ವವ್ಯಾಪಿಯಾದ ದೇವರು ಎಲ್ಲೆಡೆ ಇರುವಾಗ ದೆವ್ವ ಇರಲು ಜಾಗವೆಲ್ಲಿದೆ?*



ಮೀಟರ್ ಬಡ್ಡಿಗೆ ಸಾಲ ನೀಡುವ ರೌಡಿಗಳ ಮನದಲ್ಲಿ.

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ
*ಹಾಲಿನ ಬೆಲೆ ಜಾಸ್ತಿಯಾದ್ರೆ ಪ್ರತಿಭಟಿಸುತ್ತಾರೆ. ಆದರೆ ಆಲ್ಕೋಹಾಲಿನ ಬೆಲೆ ಜಾಸ್ತಿಯಾದ್ರೆ ಯಾಕೆ ಪ್ರತಿಭಟಿಸೋಲ್ಲ?*
ಪ್ರತಿಭಟಿಸಲು ಹುರುಪು ಬರಲೆಂದು ಬಾರ್‌ಗೆ ಹೋಗುತ್ತಾರೆ. ಆದರೆ... ವಾಲಾಡುತ್ತಾ ಧಿಕ್ಕಾರ ಕೂಗುವುದು ಬಹಳ ಕಷ್ಟವಾದ್ದರಿಂದ...

ದೀಪಕ್, ಕುಂದಾಪುರ
*ಸರ್ಕಾರ ಊಟ, ಮನೆ, ಚಿಕಿತ್ಸೆ, ಮಕ್ಕಳಿಗೆ ವಿದ್ಯಾಭ್ಯಾಸ ಎಲ್ಲವನ್ನೂ ಕೊಡುವಾಗ ಶ್ರೀಸಾಮಾನ್ಯ ಏಕೆ ದುಡಿಯಬೇಕು?*
ಸರ್ಕಾರ, ಆಡಳಿತ ನೀತಿ ಬದಲಾದಾಗ ಮಣ್ಣು ತಿನ್ನುವಂತಾಗದಿರಲು!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ಕಂಡಕ್ಟರಿಣಿಯ ಕೈಗೆ ಕೈ ಸೋಕಿ ಬಸ್ಸಿನಲ್ಲಿ ಚಿಲ್ಲರೆ ಕೇಳುವುದನ್ನೇ ಮರೆತೆನಲ್ಲಾ...?*
ಕಂಡಕ್ಟರಿಣಿ ಮರೆತಿಲ್ಲವಂತೆ... ಚಿಲ್ಲರೆ ಗಿರಾಕಿ ಎಂದ ತಕ್ಷಣ ನಿಮ್ಮ ಮುಖವೇ ನೆನಪಿಗೆ ಬರುತ್ತದಂತೆ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಕಾಮಕ್ಕೂ, ಪ್ರೇಮಕ್ಕೂ ವ್ಯತ್ಯಾಸವೇನು?*
ಕಾಮ ಕಾಡು, ಪ್ರೇಮ ಉದ್ಯಾನವನ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಆದರ್ಶ ಸಾಹಿತಿಗಳೆನಿಸಿಕೊಂಡವರು ನುಡಿದಂತೆ ಏಕೆ ನಡೆಯುವುದಿಲ್ಲ ರಾಂ?*
ನುಡಿದಷ್ಟೇ ಅಡ್ಡಾದಿಡ್ಡಿಯಾಗಿ ನಡೆದರೆ ಕಾಲು ತೊಡರಿ ಬಿದ್ದುಬಿಡುವುದರಿಂದ!

ನಾಗಮಣಿ ರವಿ, ಬೆಂಗಳೂರು
*ಲೇಡೀಸ್ ಕ್ಲಬ್ಬಲ್ಲಿ ಎಡಗೈಲಿ ತಿನ್ನೋ ಸಂಸ್ಕೃತಿ ಪರಿಚಯಿಸಿದ್ದಾರೆ. ಹೇಗಿದೆ ನಮ್ಮ ಸಂಸ್ಕೃತಿ?*
ಇದೇ ವಾಸಿ; ಮುಂದೆ ನಾಯಿಯಂತೆ ಪಾತ್ರೆ ನೆಕ್ಕುವವರು ಬರಲಿದ್ದಾರಂತೆ.

ಜಾಕೋಬ್ ಡಿಸೋಜ, ಕುರುವಳ್ಳಿ
*ತನ್ನ ತಪ್ಪನ್ನು ಮುಚ್ಚಿಟ್ಟುಕೊಂಡು ಇನ್ನೊಬ್ಬರ ತಪ್ಪನ್ನು ಹುಡುಕುವವರಿಗೆ ಏನನ್ನಬೇಕು?*
ಬಂಗಾರಸಾರ್ವಜನಿಕೊಂಬತ್ತುಲೋಕಸಿರಿಕಾಲ ಟಿವಿ!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಮನಸ್ಸಿದಲ್ಲಿ ಮಾರ್ಗ. ಕನಸಿದ್ದಲ್ಲಿ?*
ಮಂಚ, ಹಾಸಿಗೆ, ಹೊದಿಕೆ, ರಗ್ಗು, ಬೆಡ್‌ಶೀಟು........ ಅಲಾರಂ ಗಡಿಯಾರ.

ನವಿರವಿ, ಬಾಳೆಹೊನ್ನೂರು
*ಮಹಾತ್ಮ ಗಾಂಧಿಗೂ, ರಾಹುಲ್ ಗಾಂಧಿಗೂ, ಪೂಜಾ ಗಾಂಧಿಗೂ ಏನು ಸಂಬಂಧ?*
ಪು ಅಕ್ಷರ – ಬಾಪು, ಪಾಪು, ಪೂ!

## ಬಹುಮಾನಿತ ಪ್ರಶ್ನೆ

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಪ್ರಾಣವನ್ನು ಪಕ್ಷಿಗೇಕೆ ಹೋಲಿಸುತ್ತಾರೆ?*
ಇದ್ದಷ್ಟು ಹೊತ್ತೇ ಗ್ಯಾರಂಟಿ, ಯಾವಾಗ ಹಾರಿಹೋಗುತ್ತದೋ ಹೇಳುವುದಕ್ಕಾಗುವುದಿಲ್ಲ, ಎಷ್ಟೋ ಜನ ತಿನ್ನಲು ಇಷ್ಟ ಪಡುತ್ತಾರೆ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಇಲಿಗಳನ್ನು ತಿನ್ನುವ ಬೆಕ್ಕಿಗೆ ಇಲಿಗಳು ಹೇಗೆ ಗಂಟೆ ಕಟ್ಟಿಯಾವು?*
ಬೆಕ್ಕಿನ ಬಾಯಿಗೆ ಬೀಳುತ್ತಿರುವಂತೆಯೇ ಅದರ ಕತ್ತಿಗೆ ಗಂಟೆ ಬೀಳುವಂತೆ ಪ್ಲ್ಯಾನ್ ಮಾಡಿದ ರ್‍ಯಾಟ್ ಸೂಯಿಸೈಡ್ ಸ್ಕ್ವಾಡ್ ಮೂಲಕ!

ವಿ. ಹೇಮಂತಕುಮಾರ್, ಬೆಂಗಳೂರು
*ಕೆಲವು ಹಳ್ಳಿಗಳಿಗೆ ಬಸ್ ಸಂಪರ್ಕ ಇಲ್ಲದಿದ್ದರೂ ಇಂಟರ್‌ನೆಟ್ ಸಂಪರ್ಕ ಇರುತ್ತದಲ್ಲಾ...?*



ಅಚ್ಚರಿಯೇನಿಲ್ಲ. ಗಾಲಿ ಹೋಗದ ಜಾಗದಲ್ಲಿ ಗಾಳಿ ಹೋಗಬಹುದಲ್ಲ!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
*ಏಳು ಬಾರಿ ಬೀಳು, ಎಂಟು ಬಾರಿ ಏಳು ಎಂಬುದರ ಮರ್ಮ ಏನು?*
ಸಪ್ತಪದಿ ಎಂಬ ಏಳಕ್ಕೆ ಬೀಳು; ಮಧುಚಂದ್ರ, ಸೀಮಂತ, ಶಿಶುಜನನ, ಬಾಣಂತನ, ಶಾಲೆ, ಟ್ಯೂಷನ್, ಅನಾರೋಗ್ಯ, ಆಕಸ್ಮಿಕ ಎಂಬ ಎಂಟಕ್ಕೆ ಏಳು.

ಎನ್.ವಿ. ಶ್ರೀನಿವಾಸ್, ಮೈಸೂರು
*ವಿಜಯೀಭವ ಎಂದು ಹರಸಿದರೂ ಸೋಲುಂಟಾದರೆ ಏನು ಮಾಡಬೇಕು?*
ಕೇವಲ ಆಶೀರ್ವಾದ ಬಲದಿಂದ ಗೆಲ್ಲಲು ಯತ್ನಿಸದೆ ಸ್ವಪ್ರಯತ್ನ ಮಾಡಬೇಕು.

■ ರಾಮ್